ಎಲ್.ಕೆ. ಅತೀಕ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
**L.K. Atheeq, I.A.S.,**
**Principal Secretary to Government**

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಸಂ:ಗ್ರಾಅಪ/36/ಗ.ಕೋಶ/2019

ದಿನಾಂಕ:16.09.2019

ಇವರಿಗೆ:
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಜಿಲ್ಲಾ ಪಂಚಾಯತ್
ಉಡುಪಿ.

ಮಾನ್ಯರೇ,

ವಿಷಯ: Yuva Pay App ಅನ್ನು ಪ್ರಾಯೋಗಿಕವಾಗಿ ಉಡುಪಿ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.
ಉಲ್ಲೇಖ: ಆರ್ಥಿಕ ಇಲಾಖೆಯ ಅಧಿಸೂಚನೆ ಸಂ:ಆಇ.813 ವೆಚ್ಚ-12/2019, ದಿನಾಂಕ:31.08.2019.

******

ಉಡ್ಮ ಟೆಕ್ನಾಲಜೀಸ್ ಪ್ರೈ. ಲಿ., ಸಂಸ್ಥೆಯಿಂದ ಅಭಿವೃದ್ಧಿಪಡಿಸಲಾದ Yuva Pay App ಅನ್ನು ಬಳಸಿ ಕಾಡೂರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಪಂಚಾಯತ್, ಉಡುಪಿ ಜಿಲ್ಲೆಯಲ್ಲಿ ಸಾರ್ವಜನಿಕರಿಂದ ತೆರಿಗೆ ಪಾವತಿ, ನೀರಿನ ತೆರಿಗೆ ಮತ್ತು ಇತರೇ ಫೀಜುಗಳನ್ನು ಪಾವತಿಗಾಗಿ ಅನುಷ್ಠಾನಗೊಳಿಸಲಾಗಿದೆ. ಅದರಂತೆ ಉಡ್ಮ ಟೆಕ್ನಾಲಜೀಸ್ ಪ್ರೈ. ಲಿ., ಸಂಸ್ಥೆಯಿಂದ ಅಭಿವೃದ್ಧಿಪಡಿಸಲಾದ Yuva Pay App ಅನ್ನು ಪ್ರಾಯೋಗಿಕವಾಗಿ ಉಡುಪಿ ಜಿಲ್ಲೆಯಲ್ಲಿ ಒಂದು ವರ್ಷದ ಅವಧಿಗೆ ಅನುಷ್ಠಾನಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(G) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿಯನ್ನು ಆರ್ಥಿಕ ಇಲಾಖೆಯಿಂದ ನೀಡಲಾಗಿದೆ (4(G) ವಿನಾಯಿತಿ ಪ್ರತಿಯನ್ನು ಪತ್ರದೊಂದಿಗೆ ಲಗತ್ತಿಸಿದೆ).

ಆದುದರಿಂದ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

1. ಉಡುಪಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ Yuva Pay App ಅನುಷ್ಠಾನದ ಬಗ್ಗೆ ಉಡ್ಮ ಟೆಕ್ನಾಲಜೀಸ್ ಪ್ರೈ. ಲಿ., ಸಂಸ್ಥೆಯೊಂದಿಗೆ ಒಂದು ವರ್ಷದ ಕಾಲ ಒಪ್ಪಂದ ಮಾಡಿಕೊಳ್ಳುವುದು.
2. ಗ್ರಾಮ ಪಂಚಾಯತಿಗಳ ಪರವಾಗಿ ಸ್ವೀಕೃತವಾಗುವ ಮೊತ್ತವನ್ನು ಕ್ರೋಢೀಕರಿಸಲು pooling account ಅನ್ನು ತೆರೆಯುವ ಅವಶ್ಯಕತೆಯಿರುತ್ತದೆ. ಅದರಂತೆ ಜಿಲ್ಲಾ ಪಂಚಾಯತಿಯ ಹೆಸರಿನಲ್ಲಿ pooling account ತೆರೆದು, ಸದರಿ ಖಾತೆಯಲ್ಲಿ ಸ್ವೀಕೃತವಾಗುವ ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳ ನಿಧಿ ಖಾತೆಗಳಿಗೆ T+1 ದಿನದಲ್ಲಿ ವರ್ಗಾವಣೆ ಮಾಡುವಂತೆ ಉಡ್ಮ ಟೆಕ್ನಾಲಜೀಸ್ ಪ್ರೈ. ಲಿ., ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳುವುದು.

...2

ಬಹುಮಹಡಿ ಕಟ್ಟಡ, 3ನೇ ಮಹಡಿ, 3ನೇ ಗೇಟ್, ಬೆಂಗಳೂರು – 560001. M.S. Building, 3rd Floor, Gate No. 3, Bengaluru - 560 001
Tel.: 080-2235 3929 / 2203 2446 Fax : 080-2235 3927 e-mail : prsrdpr@karnataka.gov.in / principalsecretaryrdpr@gmail.com

3. ಸಾರ್ವಜನಿಕರಿಂದ Convenience fees ಅನ್ನು ಪ್ರತಿ transaction ಗೆ 1.0% of transaction value or Rs. 20 whichever is lower ಪಡೆಯಲು ಉಡ್ಮ್ಯ ಟೆಕ್ನಾಲಜೀಸ್ ಪ್ರೈ. ಲಿ., ಸಂಸ್ಥೆಯವರೊಂದಿಗೆ ಒಪ್ಪಂದ ಮಾಡಿಕೊಳ್ಳುವುದು.

ಈ ಮೇಲಿನ ಅಂಶಗಳನ್ನು ಆಧರಿಸಿ, ಉಡ್ಮ್ಯ ಟೆಕ್ನಾಲಜೀಸ್ ಪ್ರೈ. ಲಿ., ಸಂಸ್ಥೆಯವರೊಂದಿಗೆ ಒಪ್ಪಂದ ಮಾಡಿಕೊಂಡು ತಮ್ಮ ಜಿಲ್ಲೆಯಲ್ಲಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನ ಮಾಡುವುದು.

ತಮ್ಮ ವಿಶ್ವಾಸಿ,

(ಎಲ್.ಕೆ. ಅತೀಕ್, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಉಡುಪಿ.
2. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
3. ಸಂಸ್ಥಾಪಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಉಡ್ಮ್ಯ ಟೆಕ್ನಾಲಜೀಸ್ ಪ್ರೈ. ಲಿ., ಉಡುಪಿ.